ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಕಡ್ಡಾಯ ಜೀವ ವಿಮಾ ಯೋಜನೆಯಡಿ ದಿನಾಂಕ: 01.04.2006 ರಿಂದ 31.03.2008ಕ್ಕೆ ಅಂತ್ಯಗೊಂಡ ದ್ವೈವಾರ್ಷಿಕ ಅವಧಿಗೆ ಮೌಲ್ಯಮಾಪನ ವರದಿಯ ಆಧಾರದ ಮೇಲೆ ಜೀವ ವಿಮಾ ಪಾಲಿಸಿಗಳ ಸ್ಥಿರಪಡಿಸಿದ ಮೊತ್ತದ ಮೇಲೆ ಬೋನಸ್ ನೀಡಲು ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಪತ್ರ ಸಂಖ್ಯೆ: ಆಇ 46 ಕವಿಇ 2010, ದಿನಾಂಕ: 31.01.2011.
2. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕೆಜಿಐಡಿ/ಎವಿಜಿ/ವಿ.ಮೌ.ಮಾ/55/2010-11, ದಿನಾಂಕ: 25.04.2011.

ಪ್ರಸ್ತಾವನೆ:

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ 2006-2008ರ ದ್ವೈವಾರ್ಷಿಕ ಅವಧಿಯಲ್ಲಿ ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳ ಮೌಲ್ಯಮಾಪನ ಕಾರ್ಯವನ್ನು ಕೆ.ವಿ.ವೈ.ಶಾಸ್ತ್ರಿ, ಕನ್ಸಲ್ಟಿಂಗ್ ಆಕ್ಚುಯರಿ,ಹೈದರಬಾದ್ ಅವರಿಗೆ ವಹಿಸಲು ಮೇಲೆ(1) ರಲ್ಲಿ ಓದಲಾದ ದಿನಾಂಕ 31-01-2011 ರ ಸರ್ಕಾರಿ ಪತ್ರದಲ್ಲಿ ಅನುಮತಿ ನಿಡಲಾಯಿತು. ಅದರಂತೆ ಕ್ರಮಕೈಗೊಂಡ ನಿರ್ದೇಶಕರು ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರು ಮೇಲೆ (2) ರಲ್ಲಿ ಓದಲಾದ ದಿನಾಂಕ 25/04/2011 ರ ತಮ್ಮ ಪತ್ರದಲ್ಲಿ 2006-2008 ನೇ ದ್ವೈವಾರ್ಷಿಕ ಅವಧಿಯ ಕಡ್ಡಾಯ ಜೀವ ವಿಮಾ ಪಾಲಿಸಿಗಳ ಮೌಲ್ಯ ಮಾಪನ ಮಾಡಿದ ವಿಮಾ ಗಣಕರ ವರದಿಯನ್ನು ಕಳುಹಿಸಿ, ಅದನ್ನು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿಯನ್ನು ಕೋರಿರುತ್ತಾರೆ. ಮೌಲ್ಯಮಾಪನ ವರದಿಯ ಪ್ರಮುಖ ಅಂಶಗಳು ಕೆಳಕಂಡಂತಿದೆ.

1. ವಿಮಾ ವ್ಯವಹಾರದ ಮಾಹಿತಿ:

| ವಿವರಗಳು | ಮಾಪನ | ಅವಧಿ | |
|---|---|---|---|
| | | 2004-06 | 2006-08 |
| ಎ) ಚಾಲ್ತಿಯಲ್ಲಿರುವ ಪಾಲಿಸಿಗಳ | ಸಂಖ್ಯೆಗಳಲ್ಲಿ | 10,27,292 | 11,07,479 |
| ಬಿ) ವಿಮಾ ಮೊಬಲಗು | ಕೋಟಿ ರೂ.ಗಳಲ್ಲಿ | 4658.29 | 6428.16 |
| ಸಿ) ಅಧಿಲಾಭಾಂಶ | -,,- | 2528.76 | 2981.28 |
| ಡಿ) ವಾರ್ಷಿಕ ವಿಮಾ ಕಂತು ಆದಾಯ | -,,- | 223.66 | 326.02 |
| ಇ) ವಿಮಾ ನಿಧಿಯ ಶಿಲ್ಕು | -,,- | 3114.40 | 3742.90 |

2. 2006-2008 ವರ್ಷಗಳಲ್ಲಿ ವಿಮಾ ಗಣನೆಯ ನಂತರ ಹೆಚ್ಚುವರಿ ಮೊತ್ತ (ಟೋಟಲ್ ಸರ್ ಪ್ಲಸ್) ರೂ.642.77 ಕೋಟಿಗಳಾಗಿದ್ದು, ಈ ಮೊತ್ತವು 2004-2006ರ ಮೌಲ್ಯಮಾಪನ ವರದಿಯ ಅಂತ್ಯಕ್ಕೆ ರೂ.123.95 ಕೋಟಿಯಷ್ಟಿತ್ತು.

...2

3. ವಿಮಾ ಕಂತಿನ ಆದಾಯಕ್ಕನುಗುಣವಾಗಿ 2006–2008ರ ಮೌಲ್ಯಮಾಪನ ಅವಧಿಗೆ ಸರಾಸರಿ ವೆಚ್ಚದ ಅನುಪಾತ ಶೇ. 4.80 ಆಗಿದ್ದು, ಈ ವೆಚ್ಚವು 2004–2006 ರ ಅಂತ್ಯಕ್ಕೆ ಶೇ.4.78 ಆಗಿದ್ದಿತು.
4. ವಿಮಾ ನಿಧಿಯು 2006–2007 ರಲ್ಲಿ ಶೇ.8.80 ಹಾಗೂ 2007–2008 ನೇ ಸಾಲಿನಲ್ಲಿ ಶೇ.8.92 ಬಡ್ಡಿಯನ್ನು ಗಳಿಸಿದ್ದು, ಈ ದರವು 2004–2005 ರಲ್ಲಿ ಶೇ. 8.91 ಹಾಗೂ 2005–2006 ರಲ್ಲಿ ಶೇ. 8.43 ದರದಲ್ಲಿತ್ತು.
5. ವಿಮಾ ಗಣನಾ ಕಾರ್ಯಕ್ಕೆ ಅಳವಡಿಸಿಕೊಂಡ ಮಾರ್ಟಾಲಿಟಿ ಕೋಷ್ಟಕದಂತೆ ವಾಸ್ತವ ಮರಣಗಳ ಹಾಗೂ ನಿರೀಕ್ಷಿಯ ಮರಣಗಳ ಮೇಲಿನ ಅನುಪಾತ 2006–2008 ಕ್ಕೆ ಶೇ.76.04 ಇದ್ದು, ಈ ಅನುಪಾತವು 2004–2006ರ ಅವಧಿಗೆ ಶೇ.75.59 ಆಗಿದ್ದುದು ಕಂಡುಬಂದಿದೆ.

ಮುಂದುವರೆದು, ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರು ಮೇಲಿನ ಅಂಶಗಳ ಆಧಾರದ ಮೇಲೆ 2006–2008ರ ದ್ವೈವಾರ್ಷಿಕ ಅವಧಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಪಾಲಿಸಿಗಳಿಗೆ ಪ್ರತಿ 1000/– ರೂ.ಗಳಿಗೆ ಪ್ರತಿ ವರ್ಷಕ್ಕೆ ರೂ.85/– ಅಧಿಲಾಭಾಂಶವನ್ನು ಹಾಗೂ 01.04.2008 ರಿಂದ 31.03.2010ರ ಅವಧಿಯಲ್ಲಿ ಫಲಪ್ರದ, ಮರಣಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ಹೊರಹೋಗಿರುವ ಪಾಲಿಸಿಗಳಿಗೆ ಪ್ರತಿ 1000/– ರೂ.ಗಳಿಗೆ ವಾರ್ಷಿಕ ರೂ.85/– ಮಧ್ಯಂತರ ಲಾಭಾಂಶವನ್ನು ನೀಡಲು ವಿಮಾ ಗಣಕರು ಶಿಫಾರಸ್ಸು ಮಾಡಿರುತ್ತಾರೆಂದು ತಿಳಿಸಿದ್ದಾರೆ.

ಮುಂದುವರೆದು, ಮೇಲ್ಕಂಡ ವಿಮಾ ಗಣಕರ ಶಿಫಾರಸ್ಸಿನಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ಸರ್ಕಾರದ ಆದೇಶವನ್ನು ನೀಡಬೇಕೆಂದು ನಿರ್ದೇಶಕರು ಕೋರಿದ್ದಾರೆ.

1) ದಿನಾಂಕ: 01–04–2006 ರಿಂದ 31–03–2008ರ ದ್ವೈವಾರ್ಷಿಕ ಮೌಲ್ಯಮಾಪನ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಎಲ್ಲಾ ಪಾಲಿಸಿಗಳಿಗೆ ಹಾಗೂ ಚಾಲ್ತಿಯಲ್ಲಿದ್ದ ಪ್ರತಿ ತಿಂಗಳ ಅವಧಿಯನ್ನು ಒಳಗೊಂಡಂತೆ ಪಾಲಿಸಿಗಳ ಸ್ಥಿರಪಡಿಸಿದ ವಿಮಾ ಮೊತ್ತದ ಮೇಲೆ ಪ್ರತಿ ಸಾವಿರ ರೂ.ಗಳಿಗೆ ಪ್ರತಿ ವರ್ಷಕ್ಕೆ ರೂ.85/– ರಂತೆ ಸರಳ ಪ್ರತ್ಯಾವರ್ತಿ ಲಾಭಾಂಶ (ಸಿಂಪಲ್ ರಿವರ್ಷನರಿ ಬೋನಸ್) ಘೋಷಿಸುವುದು.

2) ಅವಧಿಪೂರ್ಣ, ಮರಣಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ದಿನಾಂಕ: 01–04–2008 ರಿಂದ 31–03–2010 ರ ಅವಧಿಯಲ್ಲಿ ಹೊರ ಹೋಗಿರುವ ವಿಮಾ ಪಾಲಿಸಿಗಳಿಗೆ ಪ್ರತಿ ಸಾವಿರ ರೂ. ವಿಮಾ ಮೊತ್ತಕ್ಕೆ ಪ್ರತಿ ವರ್ಷಕ್ಕೆ ರೂ. 85/– ರಂತೆ ಮಧ್ಯಂತರ ಲಾಭಾಂಶವನ್ನು (ಇಂಟೀರಿಯಮ್ ಬೋನಸ್) ಘೋಷಿಸುವುದು.

...3

ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 46 ಕವಿಇ 2010, ಬೆಂಗಳೂರು, ದಿನಾಂಕ: 21-7-2011.**

2006-2008ರ ದ್ವೈವಾರ್ಷಿಕ ಅವಧಿಯ ವಿಮಾ ಗಣನಾ ವರದಿ ಹಾಗೂ ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಇವರ ಶಿಫಾರಸ್ಸನ್ನು ವಿವರವಾಗಿ ಪರಿಶೀಲಿಸಿ ಕೆಳಕಂಡ ಅಂಶಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

i) ದಿನಾಂಕ: 31.03.2008 ರಂದು ಚಾಲ್ತಿಯಲ್ಲಿದ್ದ ಎಲ್ಲಾ ಪಾಲಿಸಿಗಳಿಗೆ 2006-2008ರ ದ್ವೈವಾರ್ಷಿಕ ಅವಧಿಯಲ್ಲಿ ವಿಮಾ ಮೊತ್ತದ ಪ್ರತಿ 1,000/- ರೂ. ಗಳಿಗೆ ವಾರ್ಷಿಕ 85/- ರೂ. ಬೋನಸ್ಸನ್ನು ನೀಡುವುದು.

ii) ದಿನಾಂಕ: 01.04.2008 ರಿಂದ 31.03.2010ರ ಅವಧಿಯಲ್ಲಿ ಅವಧಿ ಪೂರ್ಣತೆ, ಮರಣ ಜನ್ಯ ಹಾಗೂ ವಿಮಾ ತ್ಯಾಗ ಮೌಲ್ಯಗಳಿಂದ ಹೊರಹೋಗಿರುವ ವಿಮಾ ಪಾಲಿಸಿಗಳಿಗೆ ಮುಂದಿನ ಮೌಲ್ಯಮಾಪನ ದಿನಾಂಕದವರೆಗೆ ~~ಪ್ರತಿ~~ 1,000/- ರೂ.ಗಳಿಗೆ ವಾರ್ಷಿಕ 85/-ರೂ. ಮಧ್ಯಂತರ ಬೋನಸ್ಸನ್ನು ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎಂ.ಎಸ್. ಶಿವರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು).

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ ಮುದ್ರಿತ 100 ಪ್ರತಿಗಳನ್ನು ಆರ್ಥಿಕ ಇಲಾಖೆಯ ಮುಂಗಡ ಶಾಖೆಗೆ ಕಳುಹಿಸುವಂತೆ ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
4. ಎಲ್ಲಾ ಉಪ ನಿರ್ದೇಶಕರುಗಳಿಗೆ-ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರ ಮುಖಾಂತರ.
5. ಎಲ್ಲಾ ಜಿಲ್ಲಾ ವಿಮಾಧಿಕಾರಿಗಳಿಗೆ-ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು, ಇವರ ಮುಖಾಂತರ.
6. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ-ಪ್ರಕರಣ ಸಂಖ್ಯೆ: ಸಿ. 276/2011, ದಿನಾಂಕ: 08.07.2011ರನ್ವಯ ಮಾಹಿತಿಗಾಗಿ.
7. ಶಾಖಾರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.